# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 825 |
| ಸದಸ್ಯರ ಹೆಸರು | : | ಶ್ರೀ. ಎನ್. ಅಪ್ಪಾಜಿಗೌಡ |
| ಉತ್ತರಿಸಬೇಕಾದ ದಿನಾಂಕ | : | 17.12.2018 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಪ್ರಶ್ನೆ | ಉತ್ತರ |
|---|---|
| ಅ) 2017–18 ಮತ್ತು 2018–19ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಫಸಲ್ ಭೀಮಾ ಯೋಜನೆಯಡಿ ವಿಮೆ ಮಾಡಿಸಿರುವ ರೈತರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | ಫಸಲ್ ಬಿಮಾ ಯೋಜನೆಯಡಿ, ಮಂಡ್ಯ ಜಿಲ್ಲೆಯಲ್ಲಿ 2017–18 ನೇ ಸಾಲಿನಲ್ಲಿ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ 45666 ರೈತರು ಮತ್ತು 2018–19 ನೇ ಸಾಲಿನಲ್ಲಿ ಮುಂಗಾರು ಹಂಗಾಮಿಗೆ 36586 ರೈತರು ಬೆಳೆ ವಿಮೆಗೆ ನೋಂದಾಯಿಸಿರುತ್ತಾರೆ ಹಾಗೂ ಹಿಂಗಾರು ಹಂಗಾಮಿಗೆ ಬೆಳೆ ನೋಂದಣಿ ಚಾಲ್ತಿಯಲ್ಲಿದ್ದು ದಿನಾಂಕ:10-12-2018 ರವರೆಗೆ 6013 ರೈತರು ಬೆಳೆ ವಿಮೆಯಡಿ ನೋಂದಣಿ ಮಾಡಿಸಿರುತ್ತಾರೆ.<br><br>ತಾಲ್ಲೂಕುವಾರು ವಿಮೆ ಮಾಡಿಸಿರುವ ರೈತರ ಸಂಖ್ಯೆಯ ಮಾಹಿತಿಯನ್ನು <u>ಅನುಬಂಧದಲ್ಲಿ</u> ನೀಡಲಾಗಿದೆ |
| ಆ) 2017–2018 ಮತ್ತು 2018–19ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿ ವಿಮೆ ಮೊತ್ತ ಪಡೆದ ರೈತರ ಸಂಖ್ಯೆ ಹಾಗೂ ಕ್ಲೈಮ್ ಮಾಡಿದ ವಿಮೆ ಮೊತ್ತವೆಷ್ಟು; | ಫಸಲ್ ಬಿಮಾ ಯೋಜನೆಯಡಿ ಮಂಡ್ಯ ಜಿಲ್ಲೆಯಲ್ಲಿ 2017–18 ನೇ ಸಾಲಿನಲ್ಲಿ ಮುಂಗಾರು ಹಂಗಾಮಿನಲ್ಲಿ ಒಟ್ಟು 24346 ರೈತರಿಗೆ ಒಟ್ಟು ರೂ. 848.76 ಲಕ್ಷಗಳ ವಿಮಾ ಮೊತ್ತ ವಿತರಿಸಲಾಗಿದೆ.<br><br>2017–18 ಹಿಂಗಾರು ಮತ್ತು ಬೇಸಿಗೆ ಬೆಳೆ ವಿಮೆ ಪರಿಹಾರ ಇತ್ಯರ್ಥ ಪ್ರಗತಿಯಲ್ಲಿರುತ್ತದೆ.<br><br>2018–19 ನೇ ಸಾಲಿನ ಮುಂಗಾರು ಹಂಗಾಮಿನ ನೋಂದಣಿ ಮುಕ್ತಾಯವಾಗಿದ್ದು, ಹಿಂಗಾರು ಹಂಗಾಮಿನ ನೋಂದಣಿ ಪ್ರಗತಿಯಲ್ಲಿರುತ್ತದೆ.<br><br>ಅರ್ಜಿ ಸಲ್ಲಿಸಿ ಹಾಗೂ ಕ್ಲೈಮ್ ಮಾಡಿದ ವಿಮಾ ಮೊತ್ತದ ತಾಲ್ಲೂಕುವಾರು ಮಾಹಿತಿಯನ್ನು <u>ಅನುಬಂಧದಲ್ಲಿ</u> ನೀಡಲಾಗಿದೆ. |
| ಇ) ಅರ್ಜಿ ಸಲ್ಲಿಸಿ ವಿಮೆ ಮೊತ್ತ ಪಡೆಯದೆ ಇರುವ ರೈತರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | 2017 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಒಟ್ಟು 45521 ಸಂಖ್ಯೆ ರೈತರು ಅರ್ಜಿ ಸಲ್ಲಿಸಿದ್ದು, 16507 ಸಂಖ್ಯೆಯ ರೈತರು ವಿಮಾ ಪರಿಹಾರ ಪಡೆಯಲು ನಿಯಮಾನುಸಾರ ಅನರ್ಹರಾಗಿರುತ್ತಾರೆ.<br><br>2017–18 ನೇ ಸಾಲಿನ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ, ಒಟ್ಟು 145 ರೈತರು ಅರ್ಜಿ ಸಲ್ಲಿಸಿದ್ದು, 35 ಸಂಖ್ಯೆಯ ರೈತರು ವಿಮಾ ಪರಿಹಾರ ಪಡೆಯಲು ನಿಯಮಾನುಸಾರ ಅನರ್ಹರಾಗಿರುತ್ತಾರೆ ಮತ್ತು 103 ಸಂಖ್ಯೆಯ ರೈತರು ವಿಮಾ ಪಡೆಯಲು ಅರ್ಹರಾಗಿದ್ದು, ಪರಿಹಾರ ಇತ್ಯರ್ಥ ಪ್ರಗತಿಯಲ್ಲಿರುತ್ತದೆ.<br><br>ಅರ್ಜಿ ಸಲ್ಲಿಸಿ ವಿಮೆ ಮೊತ್ತ ಪಡೆಯದೆ ಇರುವ ತಾಲ್ಲೂಕುವಾರು ರೈತರ ಸಂಖ್ಯೆಯನ್ನು <u>ಅನುಬಂಧದಲ್ಲಿ</u> ಒದಗಿಸಿದೆ. |

| | |
|---|---|
| ಈ) ವಿಮೆ ಮೊತ್ತ ಬಾರದೆ **ಇರುವುದಕ್ಕೆ ಕಾರಣವೇನು;** ಅರ್ಜಿ ಸಲ್ಲಿಸಿ ವಿಮೆ ಮೊತ್ತ ಪಡೆಯದೆ ಇರುವ ರೈತರಿಗೆ ವಿಮೆ ಮೊತ್ತ ನೀಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ವಾಸ್ತವಿಕ ಇಳುವರಿಯ **ನಿಗಧಿಪಡಿಸಲಾದ ಪ್ರಾರಂಭಿಕ ಇಳುವರಿಗಿಂತ** (Threshold yield) **ಕಡಿಮೆ** ಇದ್ದರೆ, ಇಳುವರಿಯ ಕೊರತೆಗನುಗುಣವಾಗಿ ಹೋಬಳಿ/ಗ್ರಾಮ ಪಂಚಾಯತಿ ಮಟ್ಟದಲ್ಲಿ ಬೆಳೆ ವಿಮಾ ಪರಿಹಾರ ದೊರೆಯುತ್ತದೆ. ಒಂದು ವೇಳೆ, ವಾಸ್ತವಿಕ ಇಳುವರಿಯು ಪ್ರಾರಂಭಿಕ ಇಳುವರಿಗಿಂತ ಹೆಚ್ಚಿದ್ದಲ್ಲಿ ರೈತರಿಗೆ ಬೆಳೆ ವಿಮಾ ಪರಿಹಾರ ದೊರೆಯುವುದಿಲ್ಲ.<br><br>ಆದರೆ, ವಿಮೆ ಪಡೆಯಲು ಅರ್ಹರಿರುವ ರೈತರುಗಳ ಬ್ಯಾಂಕ್ ಖಾತೆ/ಆಧಾರ್ ಸಂಖ್ಯೆ ತಪ್ಪಾಗಿದ್ದಲ್ಲಿ, ಬೆಳೆ ವಿಮೆ ಪರಿಹಾರದ ಮೊತ್ತ ರೈತರ ಖಾತೆಗೆ ಜಮೆ ಆಗದೆ NEFT Rejection ಆಗಿರುತ್ತದೆ. ಇಂತಹ ಪ್ರಕರಣಗಳಲ್ಲಿ ಸಂಬಂಧಿಸಿದ ಬ್ಯಾಂಕ್‌ಗೆ Bulk Transfer ಮುಖಾಂತರ ಇತ್ಯರ್ಥಪಡಿಸಲು ವಿಮಾ ಕಂಪನಿಗಳಿಗೆ ಸೂಚನೆ ನೀಡಲಾಗಿದೆ. |

ಕೃಇ 126 ಕೃಕೈಉ 2018

(ಎನ್. ಎಚ್. ಶಿವಶಂಕರ ರೆಡ್ಡಿ)
ಕೃಷಿ ಸಚಿವರು

# ಅನುಬಂಧ

## 2017-18 ಮತ್ತು 2018-19 ನೇ ಸಾಲಿನ ಫಸಲ್ ಬಿಮಾ ಯೋಜನೆಯ ಮಂಡ್ಯ ಜಿಲ್ಲೆಯಲ್ಲಿ ತಾಲ್ಲೂಕುವಾರು ಬೆಳೆ ವಿಮೆ ವಿವರ

### 2017-ಮುಂಗಾರು

| ಕ್ರ.ಸಂ | ತಾಲ್ಲೂಕು | ಬೆಳೆ ವಿಮೆಗೆ ನೋಂದಾಯಿಸಿರುವ ರೈತರ ಸಂಖ್ಯೆ | ವಿಮಾ ಕಂಪೆನಿ ಅಂಗೀಕರಿಸಿದ ರೈತರ ಅರ್ಜಿ ಸಂಖ್ಯೆ | ಅರ್ಹ ಫಲಾನುಭವಿಗಳ ವಿವರ | | ಅನರ್ಹ ರೈತರ ವಿವರ | | | ಬೆಳೆ ವಿಮೆ ವಿತರಿಸಲಾದ ವಿವರ | | ವಿತರಿಸಲು ಬಾಕಿ ಇರುವ ವಿವರ | |
|---|---|---|---|---|---|---|---|---|---|---|---|---|
| | | | | ಅರ್ಹ ಫಲಾನುಭವಿ ರೈತರ ಸಂಖ್ಯೆ | ವಿಮಾ ಮೊತ್ತ (ಲಕ್ಷಗಳಲ್ಲಿ) | Not Ack by IC | Negative short fall | ಒಟ್ಟು ಅನರ್ಹ | ಫಲಾನುಭವಿ ರೈತರ ಸಂಖ್ಯೆ | ವಿಮಾ ಮೊತ್ತ (ಲಕ್ಷಗಳಲ್ಲಿ) | ಫಲಾನುಭವಿ ರೈತರ ಸಂಖ್ಯೆ | ವಿಮಾ ಮೊತ್ತ (ಲಕ್ಷಗಳಲ್ಲಿ) |
| 1 | ಕೃಷ್ಣರಾಜಪೇಟೆ | 11872 | 10687 | 9118 | 383.27 | 1185 | 1569 | 2754 | 8405 | 354.69 | 713 | 28.58 |
| 2 | ನಾಗಮಂಗಲ | 15717 | 15558 | 11660 | 389.02 | 159 | 3898 | 4057 | 11639 | 388.41 | 21 | 0.61 |
| 3 | ಪಾಂಡವಪುರ | 1128 | 1126 | 609 | 14.99 | 2 | 517 | 519 | 609 | 14.99 | 0 | 0 |
| 4 | ಮಂಡ್ಯ | 1221 | 1200 | 108 | 0.63 | 21 | 1092 | 1113 | 107 | 0.6 | 1 | 0.03 |
| 5 | ಮದ್ದೂರು | 10239 | 9772 | 6157 | 61.47 | 467 | 3615 | 4082 | 5079 | 55.64 | 1078 | 5.83 |
| 6 | ಮಳವಳ್ಳಿ | 5279 | 4868 | 1352 | 33.88 | 411 | 3516 | 3927 | 1352 | 33.88 | 0 | 0 |
| 7 | ಶ್ರೀರಂಗಪಟ್ಟಣ | 65 | 65 | 10 | 0.52 | 0 | 55 | 55 | 10 | 0.52 | 0 | 0 |
| ಒಟ್ಟು | | **45521** | **43276** | **29014** | **883.78** | **2245** | **14262** | **16507** | **24346** | **848.76** | **4668** | **35.02** |

### 2017-18 ಹಿಂಗಾರು ಮತ್ತು ಬೇಸಿಗೆ

| ಕ್ರ.ಸಂ | ತಾಲ್ಲೂಕು | ಬೆಳೆ ವಿಮೆ ಮಾಡಿಸಿರುವ ರೈತರ ಸಂಖ್ಯೆ | ವಿಮಾ ಕಂಪೆನಿ ಅಂಗೀಕರಿಸಿದ ರೈತರ ಅರ್ಜಿ ಸಂಖ್ಯೆ | ಅರ್ಹ ಫಲಾನುಭವಿಗಳ ವಿವರ | | ಅನರ್ಹ ರೈತರ ವಿವರ | | | ಬೆಳೆ ವಿಮೆ ವಿತರಿಸಲಾದ ವಿವರ | | ವಿತರಿಸಲು ಬಾಕಿ ಇರುವ ವಿವರ | |
|---|---|---|---|---|---|---|---|---|---|---|---|---|
| | | | | ಅರ್ಹ ಫಲಾನುಭವಿ ರೈತರ ಸಂಖ್ಯೆ | ವಿಮಾ ಮೊತ್ತ (ಲಕ್ಷಗಳಲ್ಲಿ) | Not Ack by IC | Negative short fall | ಒಟ್ಟು ಅನರ್ಹ | ಫಲಾನುಭವಿ ರೈತರ ಸಂಖ್ಯೆ | ವಿಮಾ ಮೊತ್ತ (ಲಕ್ಷಗಳಲ್ಲಿ) | ಫಲಾನುಭವಿ ರೈತರ ಸಂಖ್ಯೆ | ವಿಮಾ ಮೊತ್ತ (ಲಕ್ಷಗಳಲ್ಲಿ) |
| 1 | ಕೃಷ್ಣರಾಜಪೇಟೆ | 6 | 6 | 0 | 0 | 0 | 6 | 0 | 0 | 0 | 0 | 0 |
| 2 | ನಾಗಮಂಗಲ | 0 | 0 | 0 | 0 | 0 | 0 | 0 | 0 | 0 | 0 | 0 |
| 3 | ಪಾಂಡವಪುರ | 1 | 1 | 1 | 0.09 | 0 | 0 | 0 | 0 | 0 | 1 | 0.09 |
| 4 | ಮಂಡ್ಯ | 2 | 2 | 2 | 0.02 | 0 | 0 | 0 | 0 | 0 | 2 | 0.02 |
| 5 | ಮದ್ದೂರು | 135 | 135 | 100 | 2.28 | 0 | 35 | 35 | 0 | 0 | 100 | 2.28 |
| 6 | ಮಳವಳ್ಳಿ | 0 | 0 | 0 | 0 | 0 | 0 | 0 | 0 | 0 | 0 | 0 |
| 7 | ಶ್ರೀರಂಗಪಟ್ಟಣ | 1 | 0 | 0 | 0 | 1 | 0 | 0 | 0 | 0 | 0 | 0 |
| ಒಟ್ಟು | | **145** | **144** | **103** | **2.39** | **1** | **41** | **35** | **0** | **0** | **103** | **2.39** |

**ಸೂಚನೆ:** 2017-18 ನೇ ಸಾಲಿನ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆ ವಿಮೆ ಪರಿಹಾರ ಇತ್ಯರ್ಥ ಪ್ರಗತಿಯಲ್ಲಿರುತ್ತದೆ

**ಮಂಡ್ಯ ಜಿಲ್ಲೆಯಲ್ಲಿ 2018-19 ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ವಿಮಾ ನೋಂದಣಿ ಆಗಸ್ಟ್ ತಿಂಗಳಿಗೆ ಮುಕ್ತಾಯವಾಗಿದ್ದು ಹಿಂಗಾರು ಹಂಗಾಮಿನ ನೋಂದಣಿ ಪ್ರಗತಿಯಲ್ಲಿರುತ್ತದೆ.**

| ಕ್ರ.ಸಂ | ತಾಲ್ಲೂಕು | ಮುಂಗಾರು ಹಂಗಾಮಿನ ಬೆಳೆ ವಿಮೆಗೆ ನೋಂದಾಯಿಸಿರುವ ರೈತರ ಸಂಖ್ಯೆ | ಹಿಂಗಾರು ಹಂಗಾಮಿನಲ್ಲಿ ದಿ:10.12.2018 ರವರೆಗೆ ಬೆಳೆ ವಿಮೆಗೆ ನೋಂದಾಯಿಸಿರುವ ರೈತರ ಸಂಖ್ಯೆ |
|---|---|---|---|
| 1 | ಕೃಷ್ಣರಾಜಪೇಟೆ | 11928 | 2460 |
| 2 | ನಾಗಮಂಗಲ | 15988 | 1852 |
| 3 | ಪಾಂಡವಪುರ | 399 | 26 |
| 4 | ಮಂಡ್ಯ | 60 | 8 |
| 5 | ಮದ್ದೂರು | 3671 | 189 |
| 6 | ಮಳವಳ್ಳಿ | 4523 | 1462 |
| 7 | ಶ್ರೀರಂಗಪಟ್ಟಣ | 17 | 16 |
| ಒಟ್ಟು | | **36586** | **6013** |